6 ● RF(A)/100/3364

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 34 ]
Total No. of Questions : 34 ]

**A**

**CCE RF**
**UNREVISED**
**FULL SYLLABUS**

**NSQF LEVEL-2**

Question Paper Serial No. **100**

**ಸಂಕೇತ ಸಂಖ್ಯೆ : 90-EK**

**Code No. : 90-EK**

# ವಿಷಯ : ಬ್ಯೂಟಿ ಮತ್ತು ವೆಲ್‌ನೆಸ್

# Subject : Beauty & Wellness

**(ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ / Kannada and English Medium)**

**(ಶಾಲಾ ಅಭ್ಯರ್ಥಿ / Regular Fresh)**

ದಿನಾಂಕ : 12. 04. 2023 ] [ Date : 12. 04. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 10-30 A.M. to 12-45 P.M.

ಗರಿಷ್ಠ ಅಂಕಗಳು : 60 ] [ Max. Marks : 60

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

***General Instructions to the Candidate :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 34 ಪ್ರಶ್ನೆಗಳನ್ನು ಹೊಂದಿದ್ದು.
   This Question Paper consists of objective and subjective types of total 34 questions.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
   This question paper has been sealed by reverse jacket. You have to cut on the right side to open the paper at the time of commencement of the examination. Check whether all the pages of the question paper are intact.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
   Follow the instructions given against both the objective and subjective types of questions.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
   Figures in the right hand margin indicate maximum marks for the question.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
   The maximum time to answer the paper is given at the top of the question paper. It includes 15 minutes for reading the question paper.

[ Turn over

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : 10 × 1 = 10**

***Four*** **alternatives are given for each of the following questions / incomplete statements. Choose the correct alternative and write the complete answer along with its question number and alphabet :**

1. ಉಸಿರಾಟ ಸಮಸ್ಯೆಗಳ ಚಿಕಿತ್ಸೆಯಲ್ಲಿ ಸಹಾಯಕವಾದ ಸಾರಭೂತ ತೈಲ

(A) ಜೆರೇನಿಯಂ (B) ನೀಲಗಿರಿ ತೈಲ

(C) ಲ್ಯಾವೆಂಡರ್ (D) ಪುದೀನ ತೈಲ

An essential oil that is helpful in treating respiratory problem is

(A) Geranium (B) Eucalyptus oil

(C) Lavender (D) Peppermint oil

2. ಸ್ಟೋನ್ ಮಸಾಜ್ ಅನ್ನು ಮಾಡಲು ಸಾಮಾನ್ಯವಾಗಿ ಬಳಸುವ ವಸ್ತು

(A) ಬಸಾಲ್ಟ್ ಸ್ಟೋನ್ (B) ಐರನ್ ಸ್ಟೋನ್

(C) ಅಯಸ್ಕಾಂತದ ಸ್ಟೋನ್ (D) ಬೆಳ್ಳಿಯ ಸ್ಟೋನ್

The material that is generally used in stone massage is

(A) Basalt stone (B) Iron stone

(C) Magnet stone (D) Silver stone

3. ಈ ಕೆಳಗಿನವುಗಳಲ್ಲಿ ಯಾವುದು ಮೂಲಭೂತ ಮಸಾಜ್‌ನ ಸ್ಟ್ರೋಕ್ ಅಲ್ಲ ?

(A) ಟಪೋಟ್‌ಮೆಂಟ್ (B) ಪೆಟ್ರಿಸ್ಸೇಜ್

(C) ನಕ್ಲಿಂಗ್ (D) ಆಕ್ಯುಪ್ರೆಶರ್

Which of the following is NOT a basic massage stroke ?

(A) Tapotment (B) Pestrissage

(C) Knuckling (D) Acupressure

4. ಬೆಳವಣಿಗೆ ಹಾಗೂ ದೇಹ ನಿರ್ಮಾಣಕ್ಕೆ ಕಾರಣವಾದ ಆಹಾರದ ಪ್ರಮುಖ ಘಟಕ

(A) ಕಾರ್ಬೋಹೈಡ್ರೇಟ್‌ಗಳು (B) ಜೀವಸತ್ವಗಳು

(C) ಸಸಾರಜನಕಗಳು (ಪ್ರೊಟೀನ್ಸ್) (D) ಖನಿಜಾಂಶಗಳು (ಮಿನರಲ್ಸ್)

The chief constituent of food responsible for growth and body building is

(A) Carbohydrates (B) Vitamins

(C) Proteins (D) Minerals

5. ಉಗುರು ಬಣ್ಣದಲ್ಲಿರುವ ಫಿಲ್ಮ್ ಫಾರ್ಮಿಂಗ್ ಏಜೆಂಟ್

(A) ಬೆಳ್ಳಿಯ ಹ್ಯಾಲೈಡ್ (B) ನೈಟ್ರೋಸೆಲ್ಯುಲೋಸ್

(C) ಟಾಸಿಲಾಮೈಡ್ (D) ಬ್ಯೂಟೈಲ್ ಅಸಿಟೇಟ್

The film forming agent in a nail polish is

(A) silver halide (B) Nitrocellulose

(C) Tosylamide (D) Butyl acetate

[ Turn over

6. ಉಗುರು ಬಣ್ಣಗಳ ತಯಾರಿಕೆಯಲ್ಲಿ ಬಳಸುವ ನೈಟ್ರೋಸೆಲ್ಯುಲೋಸ್ ಈ ಕೆಳಗಿನ ಯಾವ ದ್ರಾವಕದಲ್ಲಿ ಕರಗುತ್ತದೆ ?

(A) ಈಥೈಲ್ ಅಸಿಟೇಟ್

(B) ಬೆಳ್ಳಿಯ ಹ್ಯಾಲೈಡ್

(C) ಟಾಸಿಲ್ ಅಮೈಡ್

(D) ಐಸೋ ಪ್ರೋಪೇನಾಲ್

Which of the following solvents dissolves the nitrocellulose, used in making nail polish ?

(A) Ethyl acetate (B) Silver halide

(C) Tosylamide (D) Isopropanal

7. ಉಗುರುಗಳ ಅಂಚುಗಳನ್ನು ನಯವಾಗಿ ತೀಡಿ ಅಂದವಾದ ಆಕಾರವನ್ನು ಕೊಡುವುದಕ್ಕೆ ಬಳಸುವ ಸಾಧನ

(A) ಹೊರ ಪೊರೆ ಕತ್ತರಿ (B) ಹೊರ ಪೊರೆ ಸಂಸ್ಕಾರಕ

(C) ಉಗುರು ಕತ್ತರಿ (D) ಉಗುರು ಅರ

The tool used to gently grind down and shape the edges of nail is

(A) Cuticle cutter (B) Cuticle softener

(C) Nail cutter (D) Nail filer

8. ಒಣ ಮತ್ತು ನಿರ್ಜಲ ಚರ್ಮವನ್ನು ಹೊಂದಿದ ವ್ಯಕ್ತಿಗಳಿಗೆ ಸೂಚಿಸಬಹುದಾದ ಫೇಷಿಯಲ್‌ನ ವಿಧ

(A) ಸಾಧಾರಣ ಫೇಷಿಯಲ್ (B) ಮೊಡವೆ ಫೇಷಿಯಲ್

(C) ಗ್ಯಾಲ್ವಾನಿಕ್ ಫೇಷಿಯಲ್ (D) ಕೋಲಾಜಿನ್ ಫೇಷಿಯಲ್

The type of facial recommended for the persons with dry and dehydrated skin is

(A) Normal facial (B) Acne facial

(C) Galvanic facial (D) Collagen facial

9. ವಿದ್ಯುದ್ವಿಶ್ಲೇಷಣೆ (ಎಲೆಕ್ಟ್ರಾಲಿಸಿಸ್) ವಿಧಾನವನ್ನು ಇದಕ್ಕಾಗಿ ಉಪಯೋಗಿಸುವರು

(A) ಬೇಡದ ಕೂದಲಿನ ನಿವಾರಣೆಗಾಗಿ

(B) ಮುಖದ ಬ್ಲೀಚಿಂಗ್‌ಗಾಗಿ

(C) ಉಗುರುಗಳನ್ನು ತಿದ್ದಿ ತೀಡುವುದಕ್ಕಾಗಿ

(D) ಕ್ಯುಟಿಕಲ್‌ನ ನಿವಾರಣೆಗಾಗಿ

Electrolysis is a method used in

(A) Removing unwanted hair

(B) Face bleaching

(C) Trimming nails

(D) Removing cuticle

[ Turn over

10. ಕೂದಲಿನ ನಿರ್ಮಾಣ ಮಾಡುವ ಪ್ರಮುಖ ಪ್ರೊಟೀನ್

(A) ಗ್ಲಾಬುಲಿನ್ (B) ಕೆರಾಟಿನ್

(C) ಫೈಬ್ರಿನೋಜಿನ್ (D) ಹಿಮೊಗ್ಲೋಬಿನ್

The main protein that builds the hair is

(A) Globulin (B) Keratin

(C) Fibrinogin (D) Haemoglobin

**II. ಸೂಕ್ತವಾದ ಉತ್ತರದಿಂದ ಬಿಟ್ಟಿರುವ ಸ್ಥಳವನ್ನು ಭರ್ತಿ ಮಾಡಿ : 4 × 1 = 4**

**Fill in the blanks with suitable answer :**

11. ಕೂದಲಿನ ರಚನೆ ಮತ್ತು ಹೊಳಪನ್ನು ಉತ್ತಮಪಡಿಸುವ ಕೂದಲ ಆರೈಕೆಯ ಉತ್ಪನ್ನ .................. .

The hair care product that alters the texture and appearance of hair is .................. .

12. ಗ್ರಾಹಕರಿಗೆ ವಿಶ್ರಾಂತಿ ಮತ್ತು ಆರಾಮದಾಯಕ ಪರಿಣಾಮ ಉಂಟುಮಾಡುವ ವ್ಯಕ್ತಿಗೆ .................. .

The person who provides relaxing and create a feeling of well being is called ................. .

13. ಪಾದಗಳ ಚಿಕಿತ್ಸೆಯಲ್ಲಿ ಪ್ರಾವೀಣ್ಯತೆಯನ್ನು ಹೊಂದಿದ್ದು, ಆರೋಗ್ಯವನ್ನು ವೃದ್ಧಿಸುವ ಅಥವಾ ಕಾಪಾಡುವ ವಿಶಿಷ್ಟ ಚಿಕಿತ್ಸೆ ನೀಡುವ ವ್ಯಕ್ತಿ ..................... .

A person who is specialised in the treatment of feet with an aim to improve or maintain health through specialised treatment is a ........................ .

14. ಸೌಂದರ್ಯ ಪ್ರಸಾಧನ ಕೇಂದ್ರದಲ್ಲಿ ವಿದ್ಯುದ್ವಿಶ್ಲೇಷಣೆ (ಎಲೆಕ್ಟ್ರೊಲೈಸಿಸ್) ಬಳಸಿಕೊಂಡು ಕೂದಲ ಕೋಶಗಳನ್ನು ಶಾಶ್ವತವಾಗಿ ತೆಗೆದುಹಾಕುವ ಪರಿಣಿತ ವ್ಯಕ್ತಿ ..................... .

A specialist in a beauty organisation who uses electrolysis to permanently remove hair follicle is .................. .

**III.** 15. ***A*-ಪಟ್ಟಿಯಲ್ಲಿರುವ ಉಪಯೋಗಗಳನ್ನು ಹಾಗೂ *B*-ಪಟ್ಟಿಯಲ್ಲಿ ನೀಡಿರುವ ಸಾಧನ / ಸಲಕರಣೆಗಳೊಂದಿಗೆ ಹೊಂದಿಸಿ, ಉತ್ತರಗಳನ್ನು ಕ್ರಮಾಕ್ಷರಗಳೊಂದಿಗೆ ಬರೆಯಿರಿ :**

**4 × 1 = 4**

**Match the uses given in Column-A with their tools/materials given in Column-B and write correct answer along with its letter :**

| ***A*-ಪಟ್ಟಿ** ***Column-A*** | ***B*-ಪಟ್ಟಿ** ***Column-B*** |
|---|---|
| i) ಕ್ಯೂಟಿಕಲ್‌ನ್ನು ಮೃದುವಾಗಿಸಿ ಉಗುರುಗಳನ್ನು ಬಿರುಕು ಬಿಡುವಿಕೆ, ಸೀಳುವಿಕೆಯಿಂದ ರಕ್ಷಣೆ ಮಾಡುತ್ತದೆ<br>To make cuticles soft and pliable and prevent them from creaking or sticking to the nails | a) ಉಗುರು ಬಫರ್<br>Nail buffer |
| ii) ಯಾವುದೇ ರೀತಿಯ ಉಗುರುಗಳ ಸಿದ್ಧತೆಯಲ್ಲಿ ಬಳಸುತ್ತಾರೆ<br>Used in preparation for any nail treatment | b) ಕ್ಯೂಟಿಕಲ್ ಸಾಫ್ಟ್‌ನರ್<br>Cuticle softener |
| iii) ಉಗುರುಗಳು ಸ್ಥಿರವಾಗಿರುವಂತೆ ಮತ್ತು ಹೊಳೆಯುವಂತೆ ಮಾಡುತ್ತದೆ<br>To make looks more consistent and shiny nails | c) ಕ್ಯೂಟಿಕಲ್ ಕಟ್ಟರ್<br>Cuticle cutter |
| iv) ನಿರ್ಜೀವ ಚರ್ಮಕೋಶಗಳ ನಿವಾರಣೆಗೆ ಇದನ್ನು ಉಪಯೋಗಿಸುತ್ತಾರೆ<br>It is used for removing dead skin cells | d) ನೈಲ್ ಕಟ್ಟರ್<br>Nail cutter |
| | e) ಸ್ಕ್ರಬ್ಬರ್<br>Scrubber |
| | f) ಉಗುರು ಬಣ್ಣ<br>Nail polish |
| | g) ಉಗುರು ಅರ<br>Nail filer |

**IV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 6 × 1 = 6**

**Answer the following questions :**

16. ಏರೋಬಿಕ್ಸ್ ವ್ಯಾಯಾಮವು ಹೇಗೆ ಉಪಯುಕ್ತವಾಗಿದೆ ?

 How is aerobics a useful exercise ?

17. ಕ್ಯೂಟಿಕಲ್ ಎಂದರೇನು ?

 What is cuticle ?

18. ಹುಬ್ಬಿನ ಥ್ರೆಡ್ಡಿಂಗ್‌ಗೆ ಅಗತ್ಯವಿರುವ ಸಲಕರಣೆಗಳನ್ನು ಪಟ್ಟಿಮಾಡಿ.

 List the tools needed for threading eyebrows.

19. ಸೌಂದರ್ಯ ಸಂಸ್ಥೆಯಲ್ಲಿ ಸ್ವಾಗತಕಾರರ ಕರ್ತವ್ಯಗಳನ್ನು ತಿಳಿಸಿ.

 Mention the duties of receptionist in beauty sector.

20. ಸೌಂದರ್ಯ ಪ್ರಸಾಧನ ಸಂಸ್ಥೆಯಲ್ಲಿ ಸುಗಂಧ ಚಿಕಿತ್ಸಕ (ಅರೋಮಾ ಥೆರಪಿಸ್ಟ್) ಎಂದು ಯಾರನ್ನು ಕರೆಯುತ್ತಾರೆ ?

 Who is called Aroma therapist in a beauty organisation ?

21. ಸೌಂದರ್ಯ ಮತ್ತು ಸ್ವಾಸ್ಥ್ಯ ಉದ್ಯಮದಲ್ಲಿರುವ ಯಾವುದಾದರೂ ನಾಲ್ಕು ಉದ್ಯೋಗಾವಕಾಶಗಳನ್ನು ಹೆಸರಿಸಿ.

 Name any four career opportunities available in the beauty and wellness industry.

**V. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 6 × 2 = 12**

**Answer the following questions :**

22. ಸಾರಭೂತ ತೈಲಗಳ ಚಿಕಿತ್ಸಕ ಗುಣಲಕ್ಷಣಗಳನ್ನು ವಿವರಿಸಿ.

 Explain the therapeutic properties of essential oil.

 ***ಅಥವಾ/ OR***

 ನಾಯಿಯಂತೆ ಕೆಳಮುಖವಾಗಿ ಬಾಗುವ ಭಂಗಿಯ ಪ್ರಯೋಜನಗಳನ್ನು ಪಟ್ಟಿಮಾಡಿ.

 List the benefits of downward dog pose.

23. ಮೆನಿಕ್ಯೂರ್ ಉತ್ಪನ್ನಗಳನ್ನು ತಯಾರಿಸುವ ಭಾರತೀಯ ಮತ್ತು ಅಂತಾರಾಷ್ಟ್ರೀಯ ಬ್ರ್ಯಾಂಡ್‌ಗಳನ್ನು ಹೆಸರಿಸಿ.

Name the Indian and International brands that manufacture manicure products.

***ಅಥವಾ/ OR***

'ಮೆನಿಕ್ಯೂರ್ ಮಾಡುವಾಗ ಉಗುರುಗಳನ್ನು ಕೆಲವು ಹನಿ ಸಾಬೂನನ್ನು ಹಾಕಿರುವ ಬೆಚ್ಚಗಿನ ನೀರಿನಲ್ಲಿ ಕೆಲವು ನಿಮಿಷಗಳ ಕಾಲ ನೆನಸುವುದು ಪ್ರಯೋಜನಕಾರಿಯಾಗಿದೆ.' ಏಕೆ ? ಕಾರಣ ಕೊಡಿ.

"It is advantageous to soak nails for a few minutes in warm water having few drops of soap during manicure." Why ? Give reason.

24. ಕಾಲುಗಳ ವ್ಯಾಕ್ಸಿಂಗ್ ಪ್ರಕ್ರಿಯೆಗೆ ಅವಶ್ಯಕವಾದ ಸಾಧನಗಳು ಮತ್ತು ಸಾಮಗ್ರಿಗಳನ್ನು ಹೆಸರಿಸಿ.

Name the tools and materials required for leg waxing.

25. ಪೆಡಿಕ್ಯೂರ್ ಪ್ರಾರಂಭಿಸುವ ಮುನ್ನ ನೀವು ತೆಗೆದುಕೊಳ್ಳುವ ಪೂರ್ವ ಸಿದ್ಧತೆಯನ್ನು ವಿವರಿಸಿ.

Explain the preparation that you take before beginning of the pedicure.

26. ಮಾಯಿಶ್ಚರೈಸರ್‌ನ ಉಪಯೋಗಗಳನ್ನು ಪಟ್ಟಿಮಾಡಿ.

List the benefits of Moisturisers.

27. ಉತ್ತಮ ಶ್ಯಾಂಪೂವಿನ ಗುಣಗಳನ್ನು ಪಟ್ಟಿಮಾಡಿ.

List the qualities of good shampoo.

**VI. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **4 × 3 = 12**

**Answer the following questions :**

28. ಮೆಟ್ಟಿಲು ಅಥವಾ ಬೆಟ್ಟ ಹತ್ತುವ ವ್ಯಾಯಾಮದ ಪ್ರಾಮುಖ್ಯತೆಯನ್ನು ತಿಳಿಸಿ.

Mention the importance of the exercise climbing stairs or hills.

29. ಮದರಂಗಿ (ಮೆಹೆಂದಿ) ಪೇಸ್ಟ್ ಅನ್ನು ತಯಾರಿಸುವ ಹಂತಗಳನ್ನು ವಿವರಿಸಿ.

Explain the steps of Mehendi paste preparation.

[ Turn over

30. ಆಂಟಿ ಹೇರ್ ಫಾಲ್ ಶ್ಯಾಂಪೂ ಮತ್ತು ಕಂಡೀಷನರ್‌ಗಳ ಘಟಕಗಳನ್ನು ಹೆಸರಿಸಿ.

Name the ingredients in anti-hair fall shampoos and conditioners.

**ಅಥವಾ/ *OR***

ತೈಲಯುಕ್ತ ಶ್ಯಾಂಪೂ ಮತ್ತು ಕಂಡೀಷನರ್‌ಗಳ ಸಕ್ರಿಯಾತ್ಮಕ ಘಟಕಗಳನ್ನು ಹೆಸರಿಸಿ, ಅವುಗಳ ಉಪಯೋಗಗಳನ್ನು ತಿಳಿಸಿ.

Name the active ingredients of oily shampoos and conditioners. Mention their uses.

31. ಸರಿಯಾದ ಫೌಂಡೇಶನ್ ಷೇಡನ್ನು ಕಂಡುಹಿಡಿಯುವ ಪ್ರಕ್ರಿಯೆಯನ್ನು ವಿವರಿಸಿ.

Explain the process of identifying the right shade of foundation.

**VII. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 4 = 12**

**Answer the following questions :**

32. ನಿದ್ರಾಹೀನತೆಯಿಂದ ಬಳಲುತ್ತಿರುವ ಒಬ್ಬ ವ್ಯಕ್ತಿಗೆ ಉತ್ತಮ ನಿದ್ರೆಗಾಗಿ ನೀವು ಸೂಚಿಸುವ ಉಪಾಯಗಳನ್ನು ವಿವರಿಸಿ.

Explain the ways you suggest for good sleep to a person who is suffering from sleeplessness.

**ಅಥವಾ/ *OR***

ಸೈನಸ್‌ನ ತೊಂದರೆ ಹೊಂದಿರುವ ವ್ಯಕ್ತಿಗೆ ಕೈ ರಿಫ್ಲೆಕ್ಸಾಲಜಿ ಅಧಿವೇಶನದ ಅಗತ್ಯತೆ ಇದೆ. ಈ ಅಧಿವೇಶನದಲ್ಲಿ ನೀವು ಅನುಸರಿಸುವ ಹಂತಗಳನ್ನು ವಿವರಿಸಿ.

A person with Sinus problem needs hand reflexology session. Describe the steps that you follow in this session.

33. ನಿಮ್ಮ ಸಲೂನಿನಲ್ಲಿ ಕೂದಲಿನ ಆರೈಕೆ ಮಾಡಲು ಅವಶ್ಯಕವಾದ ಪ್ರಸಾಧನಗಳ ಪಟ್ಟಿಯನ್ನು ತಯಾರಿಸಿ. ಅವುಗಳು ಏಕೆ ಅವಶ್ಯಕವೆಂದು ಸೂಕ್ತ ಕಾರಣ ಕೊಡಿ.

Prepare a list of cosmetics for hair care requirement in your saloon, giving appropriate reason for why they are necessary.

34. ಸೌಂದರ್ಯ ಕುಶಲಿಯು ತನ್ನ ಗ್ರಾಹಕರಿಗೆ ಗೋಲ್ಡ್ ಫೇಷಿಯಲ್ ಬಳಸಲು ಸಲಹೆ ನೀಡುತ್ತಾಳೆ ಇದರ ಉಪಯೋಗಗಳೇನು ?

A beautician advises her clients to use the gold facial. What are its advantages ?

***ಅಥವಾ/ OR***

ಲೂಸ್ ಪೌಡರ್ ಹಚ್ಚುವ ವಿಧಾನವನ್ನು ವಿವರಿಸಿ ಮತ್ತು ಅದರ ಪ್ರಯೋಜನಗಳನ್ನು ಪಟ್ಟಿಮಾಡಿ.

Explain the application of loose powder and list its benefits.